ಅದಾದರೂ ಇದಿಯಾ? ನೋಡೋಣ ನಡೆಯಿರಿ' ಎಂದು ಮತ್ತೆ ಮುಂದೆ ನಮ್ಮ ಸಾಗಿಸಿದ.

'ಗುರುತಿಗೆ ಅಂತ ಒಂದು ಕಲ್ಲು ಇಟ್ಟು ಬಂದಿದ್ದೆ. ನಮ್ ಪುಣ್ಯ ಹೆಂಗಿದ್ಯೋ ಹಂಗೆ ಬನ್ನಿ' ಎಂದು ಮುಂದೆ ಹೊರಟ. ನೆಲದ ಮೇಲೆ ಗೂಡು ಮಾಡುವ ನೈಟ್ ಜಾರ್‌ನ (ನೆತ್ತಿಗ) ಮೊಟ್ಟೆಗಳನ್ನಾಗಲಿ ಅವುಗಳ ಮರಿಗಳನ್ನಾಗಿ ಹುಡುಕುವುದು ಸಖತ್ ತ್ರಾಸಿನ ಕೆಲಸ. ಇದಕ್ಕೆ ಸೂಕ್ಷ್ಮ ಸಿಐಡಿ ಕಣ್ಣುಗಳೇ ಬೇಕು. ಏಕೆಂದರೆ ಅವು ನೆಲದ ಮಣ್ಣಿನ ಜೊತೆ ಅಲ್ಲಿರುವ ಕಲ್ಲು, ಗರಿಕೆ, ಒಣ ಎಲೆಗಳ ಜೊತೆ ತಮ್ಮ ಮೈಬಣ್ಣವನ್ನು ಹೊಂದಿಸಿಕೊಂಡು ಗಪ್ ಚುಪ್ ಆಗಿ ಕೂತು ಬಿಡುತ್ತವೆ. ಆಗಷ್ಟೇ ಹುಟ್ಟಿದ ಮರಿಗಳೂ ಅಷ್ಟೇ ತುಂಬಾ ಚಾಣಾಕ್ಷವಾಗಿ ವರ್ತಿಸುತ್ತವೆ. ಈ ಗುಣ ಅವಕ್ಕೆ ಪಾರಂಪರಿಕವಾಗಿ ಮೊಟ್ಟೆಯ ಒಳಗಿಂದಲೇ ಪ್ರಾಪ್ತಿಯಾಗಿರುತ್ತದೆ. ತುಂಬಾ ಹೊತ್ತು ಅವನು ಗುರುತಿಟ್ಟ ಜಾಗೆಯ ಅಕ್ಕಪಕ್ಕ ಹುಡುಕಿದರೂ ನೆತ್ತಿಗದ ಕುಟುಂಬ ನೋಡಲು ಸಿಗಲಿಲ್ಲ. ಇವತ್ತಿನ ದಿನವೇ ಹಾಳಾಯ್ತಲ್ಲ ಎಂದು ಕೊರಗುತ್ತಾ ಅವನ ಜೊತೆ ಸುತ್ತಾಡುತ್ತಾ ಒಂದಿಷ್ಟು ಕೃಷ್ಣಮೃಗಗಳ ನೋಡಿದೆವು. 'ಮತ್ತೆ ಎಲ್ಲಾದರೂ ಬಾಲದಂಡೆ ಹಕ್ಕಿ ಗೂಡು ಕಟ್ಟಿದರೆ ಹೇಳು ಮಗ, ಬರ್ತೇನೆ ಬೇಜಾರಾಗುವುದು ಬೇಡ' ಎಂದು ಹೇಳಿ ಆ ದಿನ ಹೊರಟೆ. ಇದಾದ ಹದಿನೈದು ದಿನಕ್ಕೆ ಚಂದ್ರು ಕರೆ ಮಾಡಿ ಸರ್ ಹೊಸದೊಂದು ಗೂಡು ಹುಡುಕಿದ್ದೇನೆ ಬನ್ನಿ ಎಂದು ಕರೆದ. ಅದು ರಾಣೇಬೆನ್ನೂರಿನ ಸಮೀಪದ ಮತ್ತೊಂದು ಹಳ್ಳಿಯ ಬಳಿಯಿತ್ತು. 'ನೀವು ಖಾಯಿಷ್ ಪಟ್ಟ ಉದ್ದ ಬಾಲದ ಗಂಡು ತನ್ನ ಮರಿಗಳಿಗೆ ಊಟ ತಿನಿಸ್ತಾ ಇದೆ ಬೇಗ ಬಂದುಬಿಡಿ' ಎಂದು ಹೇಳಿದ. ಆದರೆ ಅವನು ಹೇಳಿದ ದಿನ ನನಗೆ ಕೆಲಸವಿದ್ದ ಕಾರಣ ಹೋಗಲಾಗಲಿಲ್ಲ. ನಾಡಿದ್ದು ಏನಾದರೂ ಮಾಡಿ ಬರುತ್ತೇನೆ ಎಂದು ವಾಗ್ದಾನ ಮಾಡಿದೆ. ಅದಕ್ಕೂ ಮೊದಲು ನನ್ನ ಗೆಳೆಯರಿಗೆ ಕರೆ ಮಾಡಿ, 'ನೀವು ನಾಳೆ ಹೋಗಿ ಆ ಹಕ್ಕಿಯ ಚಿತ್ರ ತೆಗೆಯಬಹುದು ಪ್ರಯತ್ನ ಮಾಡಿ ಹೋಗಿ ಬನ್ನಿ' ಎಂದು ಹೇಳಿದೆ.

ತುಮಕೂರಿನ ಡಾ. ಉಮಾಶಂಕರ್ ಹಾಗೂ ಚಳ್ಳಕೆರೆಯ ಡಾ. ರಾಘವೇಂದ್ರ ಮೊದಲೇ ತಯಾರಾಗಿದ್ದರೆಂದು ಕಾಣುತ್ತದೆ. ಹೋದವರು ಬಾಲದಂಡೆ ಹಕ್ಕಿಯ ಅತ್ಯುತ್ತಮ ಚಿತ್ರಗಳನ್ನು ತೆಗೆದು ಅದರ ಸ್ಕ್ರೀನ್‌ಶಾಟ್ ನನಗೆ ಕಳಿಸಿ ಹೊಟ್ಟೆ ಉರಿಸಿದರು. ಇದನ್ನು ನೋಡಿ ಕೆರಳಿದ ನಾನು ಮಾರನೇ ದಿನ ಅದರ ಚಿತ್ರ ತೆಗೆಯಲು ಶ್ರೀಕಾಂತ್ ಕರೆದುಕೊಂಡು ಬೆಳ್ಳಂಬೆಳಗ್ಗೆ ಹೊರಟೆ. ರಟ್ಟಿಹಳ್ಳಿ ಎಂಬಲ್ಲಿ ಇಡ್ಲಿ ತಿಂದು ನೇರ ಸ್ಥಳಕ್ಕೆ ಹೋದೆವು. ಕಾರನ್ನು ದೂರದಲ್ಲಿ ನಿಲ್ಲಿಸಿದರೆ ಒಳ್ಳೆಯದು ಎಂದು ಚಂದ್ರು ಸಲಹೆ ಇತ್ತ. 'ಈ ದಾರೀಲಿ ಓಡಾಡೋ ಹಳ್ಳಿ ಜನ ಅಡವಿ ಪಕ್ಕ ಕಾರು ನಿಂತಿರೋದು ನೋಡಿದ್ರೆ ಕುತೂಹಲ ಹೆಚ್ಚಾಗಿ ಬಂದು ನಿಲ್ತಾರೆ ಸರ್. ನಿಮ್ಮ ವಿಚಿತ್ರ ಸಲಕರಣೆ, ವೇಷ ನೋಡಿ ಇಲ್ಲೇನೋ ನಡೀತಿದೆ ಅಂತ ನುಗ್ಗಿ ಬಂದು ಇಲ್ಲದ ಪ್ರಶ್ನೆ ಕೇಳಿ ತಲೆ ತಿಂತಾರೆ. ಒಂದು ಮಾತಿಗೆ ಹೋಗೋದಿಲ್ಲ. ನೆನ್ನೆ ಹಂಗೇ ಆತು. ಆಡೋ ಹುಡುಗ್ರು ಬಂದು ಥರಾವರಿ ಎನ್‌ಕ್ವಯರಿ ಮಾಡ್ತಿದ್ರು. ನಾನು ಅವ್ರಿಗೆ ಸಮಾಧಾನ ಹೇಳಿ ಓಡ್ಸಿದೆ. ನೀವು ಸಿನಿಮಾದವ್ರು ಅನ್ನೋ ತಪ್ಪು ಕಲ್ಪನೆ ಅವರಿಗೆ. ಎಷ್ಟು ಹೇಳಿದ್ರೂ ಕೇಳೋದಿಲ್ಲ' ಎಂದು ಅಲ್ಲಾಗುವ ಸಮಸ್ಯೆಗಳನ್ನು ಹೇಳಿದ. ಇದು ಫೋಟೊಗ್ರಫಿಗೆ ಹೋದಾಗ ಸ್ಥಳೀಯರಿಂದ ಆಗುವ ಸಾಮಾನ್ಯ ಕಿರಿಕಿರಿ. ಕೆಲವೊಮ್ಮೆ ಮಾತ್ರ ವಿಪರೀತವಾಗಿ ನಾವು ಗಂಟುಮೂಟೆ ಕಟ್ಟಿಕೊಂಡು ಓಡಿ ಬಂದದ್ದು ಇದೆ.

ಚಂದ್ರು ಬಹಳ ಖುಷಿಯಿಂದ, 'ಸರ್ ಹಿಂದಿನ ಸಲ ಆದಂಗೆ ಈ ಸಲ ಮೋಸ ಆಗಲ್ಲ ಬನ್ನಿ. ಈ ಗೂಡು ತುಂಬಾ ಚೆನ್ನಾಗಿದೆ ಎಂದು ಸ್ಥಳಕ್ಕೆ ಕರೆದುಕೊಂಡು ಹೋಗಿ ನಿಲ್ಲಿಸಿದ. ನಾವು ಕ್ಯಾಮೆರಾ ತೆಗೆದು, ಟ್ರೈಪಾಡು ಸೆಳೆದು ರೆಡಿಯಾಗತೊಡಗಿದೆವು. ಗೂಡಿದ್ದ ಪೊದೆಯೊಳಗೆ ನುಗ್ಗಿ ಹೋದ ಚಂದ್ರು, 'ಸಾರ್ ಅಯ್ಯಯ್ಯೋ' ಎಂದು ಕೂಗಿಕೊಂಡ. ಏನಾಯಿತೆಂದು ತಿಳಿಯದೆ ಗಾಬರಿ ಬಿದ್ದು ಓಡಿದೆವು. ಚಂದ್ರು ಪೆಚ್ಚು ಮುಖ ಮಾಡಿಕೊಂಡು, 'ಸರ್ ಅನ್ಯಾಯವಾಗಿದೆ' ಎಂದು ದುಃಖದಲ್ಲಿ ಹೇಳಿದ. ಅವನು ತೋರಿಸಿದ ಕಡೆ ನೋಡಿದೆವು. ಈಬಾರಿ ಹಿಂದಿನ ಸಲಕ್ಕಿಂತಲೂ ದೊಡ್ಡ ಅನಾಹುತವೇ ಜರುಗಿ ಹೋಗಿತ್ತು. ಕಳೆದ ಸಲ ಗೂಡು ಉಳಿದು ಮರಿಗಳನ್ನು ಕೆಂಪುಕಾಗೆ ತಿಂದು ಹಾಕಿತ್ತು. ಈಗ ನೋಡಿದರೆ ಇಡೀ ಗೂಡೇ ನಾಪತ್ತೆಯಾಗಿತ್ತು. ಗೂಡು ಕಟ್ಟಿದ್ದ ಕೊಂಬೆಯೂ ತುಂಡಾಗಿತ್ತು. 'ಯಾರೋ ಹರಾಮ್ ಖೋರ್ ನನ್ನಕ್ಕಳು ಗೂಡನ್ನೇ